ಫ್ಯಾಕ್ಸ್ : 080-23332521 ದೂರವಾಣಿ : 080-23332521/23330153(259)

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065

ಸಂಖ್ಯೆ: ಆಕ/ಸಾ.ವಿ-2/ಕೋವಿಡ್-19/ಓಮೈಕ್ರಾನ್/2021-22 ದಿನಾಂಕ: 28/01/2022

## ಸು ತ್ತೋ ಲೆ

ವಿಷಯ: ಕೋವಿಡ್-19 ಸಾಂಕ್ರಮಿಕ ರೋಗಕ್ಕೆ ಒಳಪಟ್ಟ ರಾಜ್ಯ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ಸೇವೆಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನ ಸೌಧ, ಬೆಂಗಳೂರುರವರ ದಿನಾಂಕ: 27/01/2022ರ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ: ಆಇ 02 ಸೇನಿಸೇ 2022
2. ಈ ಕಛೇರಿಯ ದಿನಾಂಕ: 20/01/2022ರ ಸುತ್ತೋಲೆ ಸಂಖ್ಯೆ: ಆಕ/ಸಾ.ವಿ-2/ಕೋವಿಡ್-19/ಓಮಿಕ್ರಾನ್/2021-22
3. ಸರ್ಕಾರದ ದಿನಾಂಕ: 22/07/2020ರ ಆದೇಶ ಸಂಖ್ಯೆ: ಎಫ್‌ಡಿ 04(ಇ) ಎಸ್‌ಆರ್‌ಎಸ್ 2020
4. ಕುಲಪತಿಗಳು, ಕೃ.ವಿ.ವಿ., ಗಾಕೃವಿಕೇ, ಬೆಂಗಳೂರುರವರ ಅನುಮೋದನೆಯ ದಿನಾಂಕ: 28/01/2022

><<>><<>><

ಸರ್ಕಾರವು ಉಲ್ಲೇಖ-1ರ ದಿನಾಂಕ: 27/01/2022ರ ಆದೇಶದಲ್ಲಿ ಕೋವಿಡ್-19 ಸಾಂಕ್ರಮಿಕ ರೋಗಕ್ಕೆ ಒಳಪಟ್ಟ ರಾಜ್ಯ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಕುರಿತು, ಉಲ್ಲೇಖ-3ರಲ್ಲಿ ಹೊರಡಿಸಿರುವ ಮುಂಜಾಗ್ರತಾ ಕ್ರಮದ ಮಾರ್ಗಸೂಚಿಯನ್ನು ಮಾರ್ಪಡಿಸಿ, ಕೋವಿಡ್-19 ರೋಗದಿಂದ ಸೋಂಕಿತ ರಾಜ್ಯ ಸರ್ಕಾರಿ ನೌಕರರಿಗೆ ಸಂದರ್ಭಾನುಸಾರ ವಿಶೇಷ ಸಾಂದರ್ಭಿಕ ರಜೆಯನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಈ ಕೆಳಕಂಡಂತೆ ಮಂಜೂರು ಮಾಡಬಹುದಾಗಿದೆ ಎಂದು ಆದೇಶಿಸಿರುತ್ತದೆ.

*"ಸರ್ಕಾರಿ ನೌಕರ ಅಥವಾ ಆತನ ಕುಟುಂಬದ ಸದಸ್ಯರು ಕೋವಿಡ್-19 ಸಾಂಕ್ರಮಿಕ ರೋಗಕ್ಕೆ ಒಳಪಟ್ಟ ಸಂದರ್ಭದಲ್ಲಿ ಹಾಗೂ ಸರ್ಕಾರಿ ನೌಕರನು ವಾಸಿಸುವ ಪ್ರದೇಶವನ್ನು ಕಂಟೇನ್ಮೆಂಟ್ ಪ್ರದೇಶವೆಂದು ಘೋಷಿಸಿ ಸಾರ್ವಜನಿಕ ಸಂಚಾರದಲ್ಲಿ ಯಾವುದೇ ನಿರ್ಬಂಧ ವಿಧಿಸಿದ್ದಲ್ಲಿ ಅಂತಹ ಸರ್ಕಾರಿ ನೌಕರನಿಗೆ ಗರಿಷ್ಟ 7 ದಿನಗಳ (ಏಳು ದಿನಗಳು) ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು".*

1. ಸದರಿ ಸರ್ಕಾರದ ಆದೇಶ / ಸೂಚನೆಗಳಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳು ವಿಶ್ವವಿದ್ಯಾನಿಲಯದ ಬೋಧಕ ಹಾಗೂ ಬೋಧಕೇತರ ನೌಕರರಿಗೆ ಗರಿಷ್ಠ 7 ದಿನಗಳ (ಏಳು ದಿನಗಳು) ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು.
2. ಈ ಸೂಚನೆಗಳು ದಿನಾಂಕ: 27/01/2022ರಿಂದ ಅನ್ವಯಿಸಿ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತವೆ.
3. ಈ ಕಛೇರಿಯ ದಿನಾಂಕ: 20/01/2022 (ಉಲ್ಲೇಖ-2)ರ ಸುತ್ತೋಲೆ ಸಂಖ್ಯೆ: ಆಕ/ಸಾ.ವಿ-2/ಕೋವಿಡ್-19/ಓಮಿಕ್ರಾನ್/2021-22ರಲ್ಲಿ ಹೊರಡಿಸಲಾಗಿರುವ ಸೂಚನೆಗಳನ್ನು ಮಾರ್ಪಡಿಸಿ ಈ ಸುತ್ತೋಲೆ ಹೊರಡಿಸಲಾಗಿದೆ.

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

ಪ್ರತಿಗಳು:
1. ಎಲ್ಲಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
2. ವಿಶೇಷಾಧಿಕಾರಿಗಳು, ಕೃಷಿ ಮಹಾವಿದ್ಯಾಲಯ, ಚಾಮರಾಜನಗರ

ಮು.ತಿ.ನೋ

3. ವಿಶೇಷಾಧಿಕಾರಿಗಳು, ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ, ಗಾಕೃವಿಕೇಂ., ಬೆಂಗಳೂರು
4. ಎಲ್ಲಾ ಸಹ ಸಂಶೋಧನಾ ನಿರ್ದೇಶಕರುಗಳು, ಪ್ರಾಂತೀಯ ಕೇಂದ್ರಗಳು
5. ಕೋ ಆರ್ಡಿನೇಟರ್ ಮತ್ತು ನೋಡಲ್ ಅಧಿಕಾರಿ, ಪಿ.ಪಿ.ಎಂ.ಸಿ., ಕುಲಪತಿಗಳ ಕಛೇರಿ, ಗಾಕೃವಿಕೇಂ., ಬೆಂಗಳೂರು
6. ಮುಖ್ಯಸ್ಥರು, ಎ.ಕೆ.ಎಂ.ಯು., ಕೃವಿವಿ, ಗಾಕೃವಿಕೇಂ., ಬೆಂಗಳೂರು – ಕೃಷಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ನಲ್ಲಿ ಅಪ್ ಲೋಡ್ ಮಾಡಲು ಕೋರಲಾಗಿದೆ
7. ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರು / ಎಲ್ಲಾ ವಲಯ ಕೃಷಿ ಸಂಶೋಧನಾ ಕೇಂದ್ರಗಳು
8. ಎಲ್ಲಾ ಹಿರಿಯ ಕ್ಷೇತ್ರಾಧಿಕ್ಷಕರುಗಳು ಹಾಗೂ ಕ್ಷೇತ್ರಾಧಿಕ್ಷಕರುಗಳು, ಪ್ರಾಂತೀಯ ಸಂಶೋಧನಾ ಕೇಂದ್ರಗಳು / ಕೃಷಿ ಸಂಶೋಧನಾ ಕೇಂದ್ರಗಳು / ಕೃವಿವಿಯ ಎಲ್ಲಾ ಪ್ರಾಯೋಜನೆಗಳು
9. ಅಧ್ಯಕ್ಷರು / ಪ್ರಧಾನ ಕಾರ್ಯದರ್ಶಿಗಳು, ಬೋಧಕರ ಸಂಘ, ಕೃವಿವಿ, ಗಾಕೃವಿಕೇಂ., ಬೆಂಗಳೂರು
10. ಪ್ರಧಾನ ಕಾರ್ಯದರ್ಶಿಗಳು, ನೌಕರರ ಸಂಘ, ಕೃವಿವಿ., ಗಾಕೃವಿಕೇಂ., ಬೆಂಗಳೂರು
11. ಕುಲಪತಿಗಳ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃವಿವಿ., ಗಾಕೃವಿಕೇಂ., ಬೆಂಗಳೂರು
12. ಕಛೇರಿ ಪ್ರತಿ